## 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂ: 9**

**ಸಿ ಡಬ್ಲ್ಯೂ: 8**

| | | |
|---|---|---|
| ಸಾಕ್ಷಿದಾರರ ಹೆಸರು | : | ರಫೀಕ ಕಣಗಾವಿ |
| ತಂದೆಯ ಹೆಸರು | : | ನಿಯಾಜಸಾಬ |
| ವಯಸ್ಸು | : | 63 ವರ್ಷಗಳು |
| ಉದ್ಯೋಗ | : | ಡ್ರೈವರ |
| ವಾಸಸ್ಥಳ | : | ಬೂಸಪ್ಪ ಚೌಕ, ಧಾರವಾಡ |

ದಿನಾಂಕಃ 21-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಧಾರವಾಡ ಶಹರ ಪೋಲಿಸ ಠಾಣೆಯಲ್ಲಿ ನನಗೆ ಸಹಿ ಮಾಡಲು ಕರೆದಿದ್ದರು ನಾನು ಸಹಿ ಮಾಡಿ ಹೋಗಿದ್ದೇನೆ. ಯಾವ ವಿಷಯಕ್ಕೆ ಮತ್ತು ಯಾವ ಕೇಸಿಗೆ ಎಂದು ನನಗೆ ಗೊತ್ತಿಲ್ಲ . ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪಡೆದುಕೊಂಡಿಲ್ಲ . ಈ ದಿನ ನ್ಯಾಯಾಲಯದ ಪರದೆ ಮೇಲೆ ವಿ ಸಿ ಮುಖಾಂತರ ಸೆಂಟ್ರಲ್ ಜೈಲಿನಿಂದ ತೋರಿಸಿದ ಆರೋಪಿಯನ್ನು ನಾನು ಯಾವತ್ತು ನೋಡಿಲ್ಲ ಮತ್ತು ಆತನು ಠಾಣೆಯಲ್ಲಿ ಇರಲಿಲ್ಲ . ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ . ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿರುವ ಸಹಿ ನನ್ನದು . ಸಾಕ್ಷಿಯ ಸಹಿಯನ್ನು ಗುರುತಿಸಿದ ಕಾರಣ ಬಟ್ಟೆ ಜಪ್ತು ಪಂಚನಾಮೆಯನ್ನು ನಿ ಪಿ -11 ಎಂದು ಸಾಕ್ಷಿಯ ಸಹಿಯನ್ನು ನಿಪಿ -11 (ಎ) ಎಂದು ಗುರುತಿಸಲಾಯಿತು. ಈಗ ನನಗೆ

ತೋರಿಸಿದ ಫೋಟೋದಲ್ಲಿ ನಾನು , ಶಕೀಲ ಮತ್ತು ಪೊಲೀಸರು ಮತ್ತು ಇನ್ನೊಬ್ಬ ವ್ಯಕ್ತಿ ಇರುತ್ತಾರೆ. ಆತ ಯಾರು ಎಂದು ಗೊತ್ತಿಲ್ಲ . ಪೊಟೊ ಯಾಕೆ ತೆಗೆದಿದ್ದಾದರೆ ಎಂದು ಗೊತ್ತಿಲ್ಲ . ಸದರಿ ಪೊಟೊವನ್ನು ನಿಪಿ – 12 ಮತ್ತು 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 23-02-2022 ರಂದು ಬೆಳಗ್ಗ 9.00 ಗಂಟೆಗೆ ನನ್ನನ್ನು ಮತ್ತು ಶಕೀಲನನ್ನು ಧಾರವಾಡ ಶಹರ ಪಂಚನಾಮೆ ಪಂಚನಾಮೆ ರನ್ನಾಗಿ ಕರೆಯಿಸಿದ್ದು ಆರೋಪಿ ಶಿವಶಂಕರ ಗರಗ ಇತನು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಠಾಣೆಯಲ್ಲಿ ನಮ್ಮ ಸಮಕ್ಷಮ ಹಾಜರುಪಡಿಸಿದ್ದು ಒಂದು ನಿಲಿ ಕಲರಿನ ಜೆನ್ಸ ಪ್ಯಾಂಟ ಮತ್ತು ಒಂದು ಕಪ್ಪು ಕಲರಿನ ಅರ್ಧ ತೋಳಿನ ಟಿ ಶರ್ಟ ಮತ್ತು ತಿಳಿ ನೀಲಿ ಕಲರಿನ ಪೂರ್ತಿ ಕೈಯ ಟಿ ಶರ್ಟನ್ನು ಹಾಜರುಪಡಿಸಿದ್ದು ಪೇಪರನಲ್ಲಿ ಸೀಲು ಮಾಡಿ ಪ್ಯಾಕ ಮಾಡಿ ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡು ನಿಪಿ –11 ರ ಪ್ರಕಾರ ಪಂಚನಾಮೆ ಮಾಡಿ ನನಗೆ ಓದಿ ಹೇಳಿದ್ದಾರೆ ಎಂದರೆ ಸರಿಯಲ್ಲ . ನಿಪಿ –12 ಮತ್ತು 13 ರ ಪ್ರಕಾರ ಸ್ಥಳದಲ್ಲಿಲ ಪೊಟೋ ತೆಗೆದು ಪ್ಯಾಕ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಂ ಕೆ ವಕೀಲರಿಂದ:**

ಆರೋಪಿ ಪರ ವಕೀಲರಾದ ಎಂ ಎಂ ಕೆ ಹಲವಾರು ಬಾರಿ ಕರೆಯಿಸಲಾಯಿತು . ಗೈರು ಹಾಜರಾಗಿರುತ್ತಾರೆ . ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು .

**ಮರು ವಿಚಾರಣೆ:** ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.

ಈಗ ಒಂದು ವರ್ಷದ ಹಿಂದೆ ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಸಹಿ ಮಾಡಿಸಿಕೊಂಡು ಹೋಗಿದ್ದಾರೆ. ನನ್ನ ಮನೆ ಧಾರವಾಡದ ಕೊರವರ ಓಣಿಯಲ್ಲಿ ಇದೆ. ಪೋಲೀಸರು ಸಾಕ್ಷಿಯಾಗಿ ಸಹಿ ಮಾಡು ಅಂತಾ ಹೇಳಿದರು, ಅದಕ್ಕೆ ಸಹಿ ಮಾಡಿದೆನು. ನನ್ನ ಸಹಿ ನೋಡಿದರೆ ಗುರ್ತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿಪಿ-2 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರ್ತಿಸಿದ ಅವರ ಸಹಿಯನ್ನು ನಿಪಿ-2(ಬಿ) ಅಂತಾ ಗುರ್ತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಪೋಟೋಗಳಲ್ಲಿ ನನ್ನ ಭಾವ ಚಿತ್ರ ಇದೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಅಂತಾ ಗುರ್ತಿಸಲಾಗಿದೆ.

ನಿಪಿ-3 ಮತ್ತು ನಿಪಿ-4 ಗಳಲ್ಲಿ ಕಾಣುವ ಹುಡುಗಿ ನಮ್ಮ ಮನೆಯ ಹತ್ತಿರ ವಾಸ ಇದ್ದಾರೆ. ಸದರಿ ನಿಪಿ-3 ಮತ್ತು ನಿಪಿ-4 ಪೋಟೋಗಳನ್ನು ಆ ಹುಡುಗಿಯ ಮನೆಯಲ್ಲಿ ತೆಗೆದಿದ್ದಾರೆ, ಆಕೆಯ ಹೆಸರು ತನುಜಾ ಸುಣಗಾರ ಅಂತಾ ಇದೆ. ತನುಜಾಳಿಗೆ ಯಾವುದೂ ಹುಡುಗ ಚಾಕು ಹಾಕಿದ್ದಾನೆ ಅಂತಾ ಪೋಲೀಸ ಕೇಸ ಆಗಿತ್ತು, ಅದಕ್ಕಾಗಿ ಆ ಪೋಟೋಗಳನ್ನು ಪೋಲೀಸರು ತೆಗೆದಿದ್ದಾರೆ. ಪೋಲೀಸರು ತನುಜಾಳ ಮನೆಯಲ್ಲಿ ಪಂಚನಾಮೆ ಮಾಡಿದರು. ತನುಜಾಳ ಮನೆಯಲ್ಲಿ ಪೋಲೀಸರು ನನ್ನ ಸಹಿಯನ್ನು ಪಂಚನಾಮೆಗೆ ಮಾಡಿಸಿಕೊಂಡಿದ್ದಾರೆ.

(ಈ ಹಂತದಲ್ಲಿ ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:</u>

ದಿನಾಂಕಃ22-02-2022 ರಂದು ತನುಜಾ ಸುಣಗಾರ ಇವಳಿಗೆ ಶಿವಶಂಕರ ಗರಗ ಇತನು ಚಾಕು ಹಾಕಿದ್ದಾನೆ ಅಂತಾ ತನುಜಾರವರು ತೋರಿಸಿದ ಜಾಗೆಯಲ್ಲಿ ಪೋಲೀಸರು ಪಂಚನಾಮೆ ಮಾಡಿದರು ಅಂದರೆ ಸರಿ. ಪೋಲೀಸರು ಘಟನಾ ಸ್ಥಳದಲ್ಲಿಯೆ ಪಂಚನಾವೆ ಮಾಡಿ ನನ್ನ ಸಹಿ ಮಾಡಿಸಿಕೊಂಡರು ಅಂದರೆ ಸರಿ. ಘಟನಾ ಸ್ಥಳದ ಪಂಚನಾಮೆ ಮಾಡಿದ್ದಕ್ಕಾಗಿ ಪೋಲೀಸರು ನಿಪಿ-3 ಮತ್ತು ನಿಪಿ-4 ಪೋಟೋಗಳನ್ನು ತೆಗೆದಿದ್ದಾರೆ ಅಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಐ.ಎಂ ವಕೀಲರಿಂದ:</u>

ನನಗೆ ಆರೋಪಿಯ ಪರಿಚಯ ಇಲ್ಲ. ಪೋಲೀಸರು ಸಹಿ ಮಾಡು ಅಂತಾ ಅಂದಿದ್ದಕ್ಕೆ ಸಹಿ ಮಾಡಿದ್ದೇನೆ ಮತ್ತು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಅಂದರೆ ಸರಿ.

<u>ಮರು ವಿಚಾರಣೆ:</u> ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,<br>ಧಾರವಾಡ.